ಆನಂದಿಸಿ ಅಲ್ಲಿಂದ ಎಲ್ಲ ಸೀದಾ ರವೀಂದ್ರ ಕಲಾ ಕ್ಷೇತ್ರದ ಪಕ್ಕದ ಕೊಠಡಿಗೆ ತಲುಪಿದೆವು. ಅಲ್ಲಿ ಕೇಶವ, ಎಂ.ಆರ್. ಕಮಲ, ಸತ್ಯಮೂರ್ತಿ ಆನಂದೂರು, ಚಂದ್ರಶೇಖರ ಆಲೂರು, ಕೆ. ಸತ್ಯನಾರಾಯಣ, ಪ್ರತಿಭಾ ನಂದಕುಮಾರ್, ಚಕ್ಕೆರೆ ಶಿವಶಂಕರ ಎಲ್ಲರೂ ಸಿಕ್ಕರು. ಕಾರ್ಯಕ್ರಮ ಆಪ್ತವಾಗಿ ಆಯಿತು. ಮುಕುಂದರ ಸಮಾಧಾನ ಮೂಕ ಉಮ್ಮಳದಂತಿತ್ತು. ಹೀಗೆ ಕ್ವಿಂಟಾಲುಗಟ್ಟಲೆ ಸ್ಫೂರ್ತಿಯನ್ನು ಹೊತ್ತುಕೊಂಡು ನಾವು ಮುಂಬಯಿಗೆ ಮರಳಿದೆವು. ಕೇಶವ ಬೀಳ್ಕೊಡಲು ಸ್ಟೇಷನ್ನಿಗೆ ಬಂದಿದ್ದ. ಬರುವಾಗ ಮುಕುಂದ ರೈಲಿನಲ್ಲಿ "ಶೋಲಾಪುರದ ಅಲೌಕಿಕ ಸಂಜೆ ಬೆಳಕಿನ ನೆನಪಿಗೆ" ಎಂಬು ಬರೆದು ನನಗೆ ಪ್ರತಿಯನ್ನು ಕೊಟ್ಟರು.

ಈ ಒಂದು ಹುರುಪಿನಲ್ಲೆ ಮುಕುಂದ ತಮ್ಮ ಜೀವಾಳದ ಕೃತಿಯಾದ 'ನಿರುತ್ತರ' ಕಾದಂಬರಿಯನ್ನು ಮುಂದಿನ ಒಂದೆರಡು ವರ್ಷಗಳಲ್ಲಿ ಬರೆಯಲು ತೊಡಗಿದರು. ನಾಲ್ಕು (ಕಲ್ಪನಾ, ನಚಿಕೇತ, ನಿಖಿಲ, ಶಾಂತಲಾ) ಸುದೀರ್ಘ ಪತ್ರಗಳ ಮೂಲಕ ಮಾರ್ಮಿಕವಾಗಿ ಪ್ರಕಟಗೊಳ್ಳುವ ನಾಲ್ಕು ಪಾತ್ರಗಳ ನಡುವಿನ ವಿಶಿಷ್ಟ ಸಂಬಂಧಗಳ ಕೃತಿ ಇದು. (ನಿರುತ್ತರ, 1996 ಗೀತಾ ಬುಕ್ ಹೌಸ್, ಮೈಸೂರು). ಹಸ್ತಪ್ರತಿಯಲ್ಲೆ ಇದನ್ನು ಯಶವಂತ ಚಿತ್ತಾಲ, ಮಾರುತಿ ಶಾನಭಾಗ ("ಮುಕ್ತಿ" ಕಾದಂಬರಿ ಕುರಿತ ತಮ್ಮ ವಿಮರ್ಶೆಗಾಗಿ ಸಾಹಿತ್ಯಾಸಕ್ತರ ಮನದಲ್ಲಿರುವವರು) ಇಬ್ಬರೂ ತುಂಬ ಇಷ್ಟ ಪಟ್ಟರು. ಅಣುಶಕ್ತಿನಗರದ ಸ್ನೇಹಿತೆ ಲೇಖಕಿ ಉಮಾ ರಾವ್ ಅವರ ಮನೆಯಲ್ಲಿ ಅದರ ಕೆಲಭಾಗಗಳನ್ನು ಮುಕುಂದ ವಾಚಿಸಿದರು. ಉಮಾ ರಾವ್ ಪ್ರೀತಿಯಿಂದ ಅವರನ್ನು ಮುಲುಂಡ್ ಜೋಷಿ ಎಂದು ಕರೆಯುತ್ತಿದ್ದರು. ಆ ಕೃತಿಗೆ ವಿವೇಕ ಬಲ್ಬನ್ನು ಬರೆದ. ಇದೇ ಸಮಯದಲ್ಲೇ ಅವರು ತಮ್ಮ ಅನುವಾದಗಳನ್ನೂ, 'ಗೀತಾದತ್ತ', 'ಬೇಗಂ ಅಖ್ತರ್' ಮತ್ತು 'ತಲತ್ ಮಹಮೂದ್' – ಕುರಿತ ನೀಳ್ ಬರಹಗಳನ್ನೂ ಬರೆದರು.

ಈ ಮೂರೂ ಮಹತ್ವದ ಲೇಖಾಂಕಗಳು ಸಂಗ್ರಹ ರೂಪದಲ್ಲಿ ಬರುವುದು ಇನ್ನೂ ಬಾಕಿ ಇದೆ. ಕನ್ನಡಕ್ಕೆ ಅವರು ಕೊಟ್ಟ ಇನ್ನೊಂದು ಅಪ್ರತಿಮ ಕೊಡುಗೆ "ಈ ರಾತ್ರಿಗಳ ಜೊತೆಗೆ ನಮಗೆ ಪ್ರೀತಿ ಯಾಕಿಲ್ಲ?" (ಕವನ ಸಂಕಲನ, ಮೂಲ ಹಿಂದಿ : ವಿಜಯಕುಮಾರ್, ಅಂಕ ಪ್ರಕಾಶನ, 2014). ಗೆಳೆಯ ಗೋಪಾಲಕೃಷ್ಣ ಪೈ ಅವರ ಮುತುವರ್ಜಿಯಿಂದಾಗಿ ಈ ಪುಸ್ತಕ ಹೊರಬಂತು. ಆದರೆ ಅವರು ಇದಕ್ಕೆಲ್ಲ ಕಾಯುವವನಲ್ಲ ತಾನು ಎಂಬಂತೆ 2012ರ ಜೂನ್‌ನಲ್ಲಿ ತೀರಿಕೊಂಡರು. ಇಂದಿನ ಕನ್ನಡದ ಹೊಸ ಕವಿಗಳು ಓದಲೇಬೇಕಾದ ಹೊಸ ಒಕ್ಕಣಿಕೆಯ, ಹೊಸ ಶಾರೀರದ ಕವಿತೆಗಳು ಇದರಲ್ಲಿವೆ.

2000ರಿಂದೀಚೆ ನಾನು ಬೆಂಗಳೂರಿಗೆ ಬಂದು ಹೊಸ ಜೀವನೋಪಾಯಗಳಿಗಾಗಿ ಪ್ರಯತ್ನಿಸುತ್ತಿದ್ದಾಗ ಆಗಾಗ ಫೋನು ಮಾಡಿ, "ವಾಪಸ್ ಬಂದ್ ಬಿಡ್ರೀ" ಎನ್ನುತ್ತಿದ್ದರು. ನಡುವೆ ಆಗ ಈಗ ಕೆಲಸದ ಮೇಲೆ ಅಥವಾ ಕೆಲಸವಿಲ್ಲದೆ ಒಂದು ಬಗೆಯ ಪುನಶ್ಚೇತನಕ್ಕಾಗಿ ಎಂಬಂತೆ ಸಣ್ಣ ನೆಪ ಮಾಡಿ ನಾನು ಮುಂಬಯಿಗೆ ಹೋದಾಗೆಲ್ಲ ಮುಕುಂದರನ್ನು ಕಾಣುತ್ತಿದ್ದೆ. ಅವರ ಅತ್ಯಂತ ಸಹಜ, ಸರಳ, ಸುಂದರ ಸಾತ್ವಿಕ ಸಹವಾಸದಲ್ಲೆ ಒಂದು ಅಭಯ ಇತ್ತು. ಶ್ರೀರಾಮ ನಡುವೆ ಕೆಲಸದ ಮೇಲೆ ರೋಮ್‌ಗೆ ಹೋಗಿದ್ದಾಗ, "ರೋಮ್ ರೋಮ್ ಮೆ ಬಸನೇವಾಲೇ ರಾಮ್" ಎಂದು ಉದ್ಗರಿಸಿದರು."ನಾನು ಇತ್ತೀಚೆ ಕಂಡುಕೊಂಡ ಅತ್ಯಂತ ಖುಷಿಯ ಕೆಲಸ ಅಂದರೆ ಮೊಮ್ಮಗನನ್ನು ಲೋಕಲ್ ರೈಲಿನಲ್ಲಿ ಕರೆದುಕೊಂಡು ವಿ.ಟಿ.ಗೆ ಹೋಗಿ ಸುತ್ತಾಡಿಸಿಕೊಂಡು ಬರುವುದು" ಎಂದು ಹೇಳಿದ್ದರು. ಇಪ್ಪತ್ತು ವರುಷಗಳ ಹಿಂದೆ ನಾವು ಮುಂಬಯಿಯನ್ನು ಬಿಟ್ಟು 1999ರ ಒಂದು ಮಧ್ಯಾಹ್ನ ಬೆಂಗಳೂರಿಗೆ ಹೊರಟು ನಿಂತಾಗ ಅವರ ಮನೆಯಿಂದ ನಾಲ್ಕೇ ನಿಮಿಷದ ಕಾಲುದಾರಿಯಲ್ಲಿದ್ದ ನಮ್ಮ ಬಸ್ ಸ್ಟಾಪಿಗೆ ಥರ್ಮಾಸು ಫ್ಲಾಸ್ಕ್ ತುಂಬ ಬಿಸಿ ಬಿಸಿ ಚಾ ತೆಗೆದುಕೊಂಡು